ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು. ದಿನಾಂಕ : **20-01-2021.**

**1 )** ಮುಂದುವರೆದ ಮುಖ್ಯ ವಿಚಾರಣೆ :

**2 )** ದಾವಾ ಸಂಖ್ಯೆ : **398-2008**ರ ವಾದ ಪತ್ರಗಳನ್ನು ನಿ.ಡಿ.**13** ಮತ್ತು ನಿ.ಡಿ.**14** ಎಂದು ಗುರುತಿಸಲಾಯಿತು.

ಪಾಟೀ ಸವಾಲು ಪ್ರತಿವಾದಿಯ ಪರ ವಕೀಲರಿಂದ :

**3 )** ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರಗಳ ಅಂಶಗಳನ್ನು ತಿಳಿದುಕೊಂಡು ಸಹಿ ಮಾಡಿರುತ್ತೇನೆ.

**4 )** ಈ ದಾವೆಯನ್ನು ಭಾಗ ಕೋರಿ ಹಾಕಿರುತ್ತಾರೆ. ನಾನು ದಾವಾ ಆಸ್ತಿಯನ್ನು ಖರೀದಿಸಲು ಅಗ್ರಿಮೆಂಟ್ ಮಾಡಿಕೊಂಡಿರುತ್ತೇನೆ. ಈ ದಾವೆ ಹಾಕಿದ ಹೆಣ್ಣುಮಗಳ ಹೆಸರು ನನಗೆ ಗೊತ್ತಿಲ್ಲ. ದಾವಾ ಅಸ್ತಿಗಳು ವೀರಪ್ಪನ ಪಿತ್ರಾರ್ಜಿತ ಆಸ್ತಿಗಳು ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಗಳು ವೀರಪ್ಪ ಮತ್ತು ಆತನ ಕುಟುಂಬದವರಿಗೆ ಹೇಗೆ ಬಂದವು ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿಗಳು ಮುನಿಯಮ್ಮ ಮತ್ತು ಅವರ ಎಲ್ಲಾ ಅಂದರೆ ಗಂಡು ಮತ್ತು ಹೆಣ್ಣು ಮಕ್ಕಳಿಗೂ ಸೇರಿದ್ದು ಎಂದರೆ ನನಗೆ ಗೊತ್ತಿಲ್ಲ. ನನ್ನ ಅಗ್ರಿಮೆಂಟ್‌ಗೆ ಮುನಿಯಮ್ಮ ಮತ್ತು ಅವರ ಗಂಡು ಮಕ್ಕಳು ಸಹಿ ಹಾಕಿದ್ದಾರೆ ಎಂದರೆ ಸರಿ. ಸದರಿ ಕರಾರು ಪತ್ರದ ಮೇಲೆ ನಿ.ಡಿ.**13** ಮತ್ತು **14**ರಲ್ಲಿ ಕಾಣಿಸಿದಂತೆ ದಾವಾ ಹಾಕಿದ್ದೇನೆ ಎಂದರೆ ಸರಿ. ಅದು ಇನ್ನು ನಡೆಯುತ್ತಿದೆ ಎಂದರೆ ಸರಿ. ದಾವಾ ಆಸ್ತಿಯಲ್ಲಿ ವಾದಿಗಳಿಗೆ ಭಾಗ ಕೊಡಲು ತೊಂದರೆ ಇಲ್ಲ ಎಂದರೆ ಸಾಕ್ಷಿಯು ಬೇರೆ ಆಸ್ತಿಯಲ್ಲಿ ಕೊಡಬಹುದು ಎಂದು ಹೇಳಿರುತ್ತಾರೆ. ನನ್ನ ಕ್ರಯದ ಕರಾರು ಪತ್ರಕ್ಕೂ ಹಾಗೂ ವಾದಿಗಳಿಗೂ ಸಂಬಂಧವಿಲ್ಲ ಅವರು ಕ್ರಯ ಪತ್ರ ಬರೆದು ಕೊಡಲು ಬಾಧ್ಯತರಲ್ಲ ಎಂದರೆ ಸರಿಯಲ್ಲ.

**5 )** ಮರು ವಿಚಾರಣೆ ಇಲ್ಲ.

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇ. ಎಂದು ಒಪ್ಪಿಕೊಂಡಿರುತ್ತಾರೆ,

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ದೇವನಹಳ್ಳಿ.